


ಬ್ರಿಟಿಷರು ಸಂಪ್ರದಾಯಪ್ರಿಯರು. ವಿದ್ಯುಚ್ಛಕ್ತಿಯ ಈ ಕಾಲದಲ್ಲೂ ಹಳೆಯ ಚಿಮಣಿಗಳನ್ನು ಮನೆಯ ಮಾಡಿನ ಮೇಲೆ ಉಳಿಸಿಕೊಂಡಿದ್ದಾರೆ. ಹಾಗೆಯೇ ಒಂದು ಶತಮಾನದ ಹಿಂದೆ ಬ್ರಿಟಿಷ್ ಅಂಚೆ ಇಲಾಖೆ ವಿನ್ಯಾಸಗೊಳಿಸಿದ ಟೆಲಿಫೋನ್ ಬೂತ್ ಈಗಲೂ ಬ್ರಿಟಿಷರ ಲಾಂಛನದಂತೆ ಲಂಡನ್ನಿನಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. 'ಲಂಡನ್ನಿನ ಟೆಲಿಫೋನ್ ಬೂತ್', ಬ್ರಿಟಿಷರ ಇತಿಹಾಸ ಪ್ರಜ್ಞೆಯ ಪ್ರತೀಕವಾಗಿ ತನ್ನ ವಿಶಿಷ್ಟ ವಿನ್ಯಾಸ ಹಾಗೂ ಬಣ್ಣದಿಂದ ಲಂಡನ್ನಿನ ಹೆಗ್ಗುರುತಾಗಿ ಪ್ರವಾಸಿಗರ ಆಕರ್ಷಣೆಯ ಸಂಗತಿಯಾಗಿದೆ.

ಸರ್ ಗೈಲ್ಸ್ ಗಿಲ್ಬರ್ಟ್ ಸ್ಕಾಟ್ (1880–1960) ಕೆಂಪು ಟೆಲಿಫೋನ್ ಬಾಕ್ಸ್ ಅನ್ನು ವಿನ್ಯಾಸಗೊಳಿಸಿದರು. ಕಬ್ಬಿಣವನ್ನು ಎರಕ ಹೊಯ್ದು ತಯಾರಿಸಿದ ಸ್ಕಾಟ್ ಅವರ 'ಕೆ 2' ವಿನ್ಯಾಸದ ಟೆಲಿಫೋನ್ ಬೂತ್ 1924ರಲ್ಲಿ ಅಂಚೆ ಇಲಾಖೆ ಆಯೋಜಿಸಿದ್ದ ವಿನ್ಯಾಸದ ಸ್ಪರ್ಧೆಯಲ್ಲಿ ಗೆದ್ದಿತ್ತು. ನಂತರ 1935ರಲ್ಲಿ ಆ ವಿನ್ಯಾಸವನ್ನು ಕೊಂಚ ನವೀಕರಿಸಿ 'ಕೆ 6' ಎಂದು ಕರೆಯಲಾಯಿತು ('ಕೆ' ಅಂದರೆ ಕಿಯೋಸ್ಕ್).

1926ರಲ್ಲಿ ಲಂಡನ್‌ನ ಬೀದಿಗಳಲ್ಲಿ ಕೆಂಪು ಬಣ್ಣದ 'ಕೆ 2' ಟೆಲಿಫೋನ್ ಬಾಕ್ಸ್‌ಗಳನ್ನು ಅಳವಡಿಸಲಾಯಿತು. ಒಂದು ಸಾವಿರ ಕೆ.ಜಿ. ಭಾರವಿದ್ದ ಇದು ರಾಜಧಾನಿಗೆ ಮಾತ್ರ ಸೀಮಿತವಾಗಿತ್ತು. ಈ ಬಾಕ್ಸ್‌ನ ಮೇಲ್ಗಡೆ ನಾಲ್ಕೂ ಕಡೆಗಳಲ್ಲಿ ಐದನೇ ಜಾರ್ಜ್ ರಾಜನ ಕಿರೀಟದ ಆಕಾರವನ್ನು ಮೂಡಿಸಿ, ಅದರಲ್ಲಿ ಗಾಳಿ ಆಡಲು ರಂಧ್ರಗಳನ್ನು ಮಾಡಿದ್ದರು. ಆ ಕಾಲದಲ್ಲಿ 1500 'ಕೆ 2' ಬಾಕ್ಸ್‌ಗಳನ್ನು ಮಾಡಿದ್ದರು. ನಂತರ ಬಂದ 'ಕೆ 6' ಬಾಕ್ಸ್ ಹಿಂದಿನದಕ್ಕಿಂತ ಕಾಲು ಭಾಗದಷ್ಟು ಮಾತ್ರ ಭಾರವಿತ್ತು. ಈ ವಿನ್ಯಾಸದ ಸುಮಾರು 20 ಸಾವಿರ ಬಾಕ್ಸ್‌ಗಳು ಇಂಗ್ಲೆಂಡಿನಾದ್ಯಂತ ಬಳಕೆಗೆ ಬಂದವು.

ಇವಕ್ಕೂ ವಯಸ್ಸಾಗುತ್ತಾ ಬಂತು. 1970ರ ಮತ್ತು 80ರ ದಶಕದಲ್ಲಿ, ಸಾರ್ವಜನಿಕ ಟೆಲಿಫೋನ್ ಬಾಕ್ಸ್‌ಗಳು, ಸೂಕ್ತ ನಿರ್ವಹಣೆಯಿಲ್ಲದೆ, ದುರಸ್ತಿ ಕಾಣದೆ ಅವಸಾನ ಕಾಣತೊಡಗಿದವು. ಅಷ್ಟೊತ್ತಿಗೆ ಆ ದೇಶದಲ್ಲಿ ಸುಮಾರು 77 ಸಾವಿರ ಈ ರೀತಿಯ ಬಾಕ್ಸ್‌ಗಳು ಇದ್ದವು. 1985ರಲ್ಲಿ ಖಾಸಗೀಕರಣಗೊಂಡ ಬ್ರಿಟಿಷ್ ಟೆಲಿಫೋನ್ ಇಲಾಖೆ ಟೆಲಿಫೋನ್ ಬೂತ್‌ಗಳ ಪರಿಸ್ಥಿತಿಯನ್ನು ಸುಧಾರಿಸಲು ಹಲವು ಬದಲಾವಣೆಗಳನ್ನು ಮಾಡಿತು. ಇದರ ಪರಿಣಾಮವಾಗಿ ಅನೇಕ 'ಕೆ 6' ಟೆಲಿಫೋನ್ ಬಾಕ್ಸ್‌ಗಳನ್ನು ಮಾರಾಟಮಾಡಿದರು. ಬಣ್ಣವನ್ನು ಸಹ ಬದಲಿಸಲಾಯಿತು. 'ಕೆ ಎಕ್ಸ್ 100' ಎಂಬ ಹೊಸ ವಿನ್ಯಾಸದ ಬಾಕ್ಸ್‌ಗಳನ್ನು ಅಳವಡಿಸಿದರು. ಬಣ್ಣ ಬದಲಿಸಿದರೂ ಜನರಿಗೆ ಕೆಂಪು ಬಣ್ಣವೇ ಹೆಚ್ಚು ಇಷ್ಟವಾಗಿತ್ತು. ಇಷ್ಟೆಲ್ಲ ಆದರೂ ಸುಮಾರು 2000 ಕೆಂಬಣ್ಣದ ಟೆಲಿಫೋನ್ ಬಾಕ್ಸ್‌ಗಳನ್ನು ಪ್ರಮುಖ ಸ್ಥಳಗಳಲ್ಲಿ ಉಳಿಸಿಕೊಂಡಿದ್ದಾರೆ.

ಈಗ ಟೆಲಿಫೋನ್ ಬಾಕ್ಸ್‌ಗಳ ಅವಶ್ಯಕತೆಯಿಲ್ಲ, ಯಾರೂ ಸಾರ್ವಜನಿಕ ಫೋನ್ ಬೂತ್ ಬಳಸುವುದಿಲ್ಲ. ಮೊಬೈಲ್ ಬಂದ ಮೇಲೆ ವಿಶ್ವದೆಲ್ಲೆಡೆ ಸಾರ್ವಜನಿಕ ಟೆಲಿಫೋನ್ ಬೂತ್ ಅಸ್ತಿತ್ವ ಕಳೆದುಕೊಂಡಿದೆ. ಆದರೆ, ಇತಿಹಾಸ ಪ್ರಿಯರಾದ ಬ್ರಿಟಿಷರು ತಮ್ಮ ದೇಶದ ಪ್ರತಿನಿಧಿಯಂತಿರುವ ಕೆಂಬಣ್ಣದ ಟೆಲಿಫೋನ್ ಬಾಕ್ಸ್‌ಗಳನ್ನು ವಿವಿಧ ರೂಪದಲ್ಲಿ ಬಳಸುತ್ತಾ ಅವನ್ನು ಮೂಲ ಸ್ವರೂಪದಲ್ಲಿಯೇ ಕಾಪಾಡಿಕೊಂಡಿದ್ದಾರೆ. ಪುಸ್ತಕಗಳನ್ನಿಡುವ ಗ್ರಂಥಾಲಯವನ್ನಾಗಿ, ಹ್ಯಾಟ್ ಮತ್ತು ಹೂ ಮಾರಾಟ ಮಾಡುವ ಅಥವಾ ಕಲಾಕೃತಿ ಹಾಗೂ ನೆನಪಿನ ಕಾಣಿಕೆಗಳನ್ನು ಮಾರುವ ಅಂಗಡಿಯಾಗಿ, ಹಣವನ್ನು ಪಡೆಯುವ ಎ.ಟಿ.ಎಂ ಯಂತ್ರವಾಗಿ, ಐಸ್ ಕ್ರೀಮ್, ಕಾಫಿ, ಟೀ ಸಿಗುವ ಕೆಫೆ ಆಗಿ ಪರಿವರ್ತನೆ ಮಾಡಿದ್ದಾರೆ. ಆಧುನಿಕವನ್ನು ಪುರಾತನದೊಂದಿಗೆ ಬೆಸೆಯುವ ಮನಸ್ಸುಳ್ಳ ಒಬ್ಬರು ಇದನ್ನು ಸೆಲ್ ಫೋನ್ ರಿಪೇರಿ ಅಂಗಡಿಯನ್ನಾಗಿ ಪರಿವರ್ತಿಸಿದ್ದಾರೆ!

ಇಂಗ್ಲೆಂಡಿಗೆ ಆಗಮಿಸುವ ಪ್ರವಾಸಿಗರು ನೆನಪಿನ ಕಾಣಿಕೆಯಾಗಿ ಕೊಂಡೊಯ್ಯಲು ಕೆಂಬಣ್ಣದ ಟೆಲಿಫೋನ್ ಬಾಕ್ಸ್ ಪ್ರತಿಕೃತಿಗಳು ನಾನಾ ರೀತಿಯಲ್ಲಿ ಮಾರಾಟಕ್ಕೆ ಲಭ್ಯವಿವೆ. ಇಂಗ್ಲೆಂಡ್ ನೆನಪಾಗಿ, ಪ್ರವಾಸದ ಸ್ಮರಣಿಕೆಯಾಗಿ ಪುಟ್ಟ ಟೆಲಿಫೋನ್ ಬಾಕ್ಸ್ ಕೊಂಡು ತರದಿದ್ದಲ್ಲಿ ಇಂಗ್ಲೆಂಡ್ ಪ್ರವಾಸ ಪರಿಪೂರ್ಣವೆನಿಸದು. ■

## ಸೆಕ್ಸ್ ಜಾಹೀರಾತು

ಪತ್ರಕರ್ತ ಸತೀಶ್ ಚಪ್ಪರಿಕೆ ಅವರ 'ಥೇಮ್ಸ್ ತಟದ ತವಕ ತಲ್ಲಣ' ಕೃತಿಯಲ್ಲಿ ಕೆಂಪು ಟೆಲಿಫೋನ್ ಬೂತ್ ಪ್ರಸ್ತಾಪವಿದೆ. ಆ ಬರಹದಲ್ಲಿನ ಒಂದು ಸ್ವಾರಸ್ಯಕರ ಭಾಗ ಹೀಗಿದೆ:

'ಟೊಟನ್ ಹ್ಯಾಮ್ ಕೋರ್ಟ್ ರೋಡ್, ಆಕ್ಸ್‌ಫರ್ಡ್ ಸ್ಟ್ರೀಟ್, ಸೊಹೊ, ಕೊವೆಂಟ್ ಗಾರ್ಡನ್... ಸುತ್ತಮುತ್ತ ಬ್ರಿಟಿಷ್ ಟೆಲಿಕಾಂನ ಸುಮಾರು ಐನೂರಕ್ಕೂ ಹೆಚ್ಚು ಬಾಕ್ಸ್ ಟೆಲಿಫೋನ್ ಬೂತ್‌ಗಳಿವೆ. ಕೆಂಪುಬಣ್ಣದ ಈ ಐತಿಹಾಸಿಕ ಬೂತ್‌ಗಳು ವ್ಯವಸ್ಥಿತವಾದ ವೇಶ್ಯಾವೃತ್ತಿಯ ಜಾಹೀರಾತು ತಾಣಗಳಾಗಿ ಬಳಕೆಯಾಗುತ್ತವೆ. ಅಂಗೈಯಗಲದ ಚೌಕಾಕಾರದ ಬಣ್ಣ ಬಣ್ಣದ ಕರೆವೆಣ್ಣಿನ ಜಾಹೀರಾತುಗಳಿರುವ ಸೆಕ್ಸ್ ಕಾರ್ಡ್‌ಗಳು ಪ್ರತಿಯೊಂದು ಟೆಲಿಫೋನ್ ಬಾಕ್ಸ್ ಒಳಗೂ ನೂರಿನ್ನೂರರಷ್ಟು ತುಂಬಿರುತ್ತವೆ. ಪ್ರತಿದಿನ ಬೆಳಗ್ಗೆ ಬ್ರಿಟಿಷ್ ಟೆಲಿಕಾಂ ಸಂಸ್ಥೆಯ ಸಿಬ್ಬಂದಿ ಬಂದು, ಟೆಲಿಫೋನ್ ಬಾಕ್ಸ್ ತುಂಬಾ ಇರುವ ಆ ರೋಚಕ ಜಾಹೀರಾತು ಕಾರ್ಡುಗಳನ್ನು ತೆಗೆದು ಹಾಕುತ್ತಾರೆ. ಆದರ ಹಿಂದೆಯೇ ಅನಧಿಕೃತ ಗುತ್ತಿಗೆದಾರರು ಆ ಹೊಸ ಕಾರ್ಡ್‌ಗಳನ್ನು ತಂದು ಟೆಲಿಫೋನ್ ಬೂತ್‌ನಲ್ಲಿ ಅಂಟಿಸಿ ಹೋಗುತ್ತಾರೆ.'